ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
MANGALORE ELECTRICITY SUPPLY COMPANY LIMITED
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN:U40109KA2002SGC030425 0824-2885766

ಸಂಖ್ಯೆ: ಪ್ರವ್ಯ(ಆ)/ಸ.ಪ್ರ..ವ್ಯ(ಆ)/ಲೆ(ಆ)/ಹಿಸ-115/19-20/ 645-32 ದಿನಾಂಕ: 13/11/19

# ಸುತ್ತೋಲೆ

ವಿಷಯ: ಅಧಿಕಾರಿ/ನೌಕರರು ಕಂಪನಿಯ ವಿರುದ್ಧ ಮಾನ್ಯ ನ್ಯಾಯಾಲಯಗಳಲ್ಲಿ ದಾವೆ ಹೂಡುವ ಮುನ್ನ ಪೂರ್ವಾನುಮತಿ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ: 1. ಕ.ವಿ.ಮಂ. ನೌಕರರ ಸೇವಾ(ನಡತೆ) ನಿಯಮಗಳು 1988 ಮತ್ತು ಕವಿಮಂ ನೌಕರರ(ಗೌಪ್ಯ ವರದಿಗಳು) ನಿಯಮಗಳು, 1990ರ ನಿಯಮ ಸಂಖ್ಯೆ: 24.
2. ಮಾನ್ಯ ವ್ಯ.ನಿ ರವರಿಂದ ಅನುಮೋದಿತ ದಿನಾಂಕ 14.08.2019 ರ ಉಪ ನಿಯಂತ್ರಣಾಧಿಕಾರಿ(ಕಂದಾಯ) ರವರ ಟಿಪ್ಪಣಿ ಸಂಖ್ಯೆ: 376

*******

ಮೆಸ್ಕಾಂ., ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಕಾರ್ಪೊರೇಟ್ ಕಛೇರಿಯಿಂದ ಪೂರ್ವಾನುಮತಿಯನ್ನು ಪಡೆದುಕೊಳ್ಳದೇ ಕಂಪನಿಯ ವಿರುದ್ಧ ಮಾನ್ಯ ನ್ಯಾಯಾಲಯಗಳಲ್ಲಿ ದಾವೆಯನ್ನು ಹೂಡುತ್ತಿರುವುದು ಕಂಪನಿಯ ಗಮನಕ್ಕೆ ಬಂದಿದ್ದು, ಕಂಪನಿಯ ಘನತೆ ಗೌರವಕ್ಕೆ ದಕ್ಕೆಯುಂಟಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದನ್ನು ಕಂಪನಿಯು ಗಂಭೀರವಾಗಿ ಪರಿಗಣಿಸಿದೆ.

ಕ.ವಿ.ಮಂ. ನೌಕರರ ಸೇವಾ(ನಡತೆ) ನಿಯಮಗಳು 1988 ಮತ್ತು ಕವಿಮಂ ನೌಕರರ(ಗೌಪ್ಯ ವರದಿಗಳು) ನಿಯಮಗಳು, 1990ರ ನಿಯಮ ಸಂಖ್ಯೆ: 24 ರಲ್ಲಿ ಮಂಡಳಿಯ ಯಾವುದೇ ಅಧಿಕಾರಿ/ನೌಕರರು ಮಂಡಳಿಯ ಪೂರ್ವಾನುಮತಿಯನ್ನು ಪಡೆಯದೇ ಪ್ರತಿಕೂಲ ಟೀಕೆಗೆ ಗುರಿಯಾಗಿರುವ ಅಥವಾ ಮಾನಹಾನಿ ಸ್ವರೂಪದ ಬಾಧೆಗೆ ಒಳಗಾದ ಯಾವುದೇ ಅಧಿಕೃತ ಕಾರ್ಯದ ಸಂರಕ್ಷಣೆಗೆ, ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯ ಅಥವಾ ಪತ್ರಿಕಾ ಮಾಧ್ಯಮದ ಆಶ್ರಯ ಪಡೆಯತಕ್ಕದ್ದಲ್ಲವೆಂದು ತಿಳಿಸಲಾಗಿರುತ್ತದೆ.

ಆದ್ದರಿಂದ, ಮೆಸ್ಕಾಂ., ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಕಂಪನಿಯ ವಿರುದ್ಧ ಮಾನ್ಯ ನ್ಯಾಯಾಲಯಗಳಲ್ಲಿ ದಾವೆಯನ್ನು ಹೂಡುವ ಮುನ್ನ ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯುವಂತೆ ಸೂಚಿಸಲಾಗಿದೆ.

ತಪ್ಪಿದಲ್ಲಿ, ಅಂತಹ ಅಧಿಕಾರಿ/ನೌಕರರ ವಿರುದ್ಧ ಕವಿಮಂ ನೌಕರರ ಸೇವಾ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1989 ರನ್ವಯ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿತವಾಗಿದೆ"

ಆದೇಶದ ಮೇರೆಗೆ,
13/11/19
ಪ್ರಧಾನ ವ್ಯವಸ್ಥಾಪಕರು(ಆ & ಮಾ.ಸಂಅ)
ಮೆಸ್ಕಾಂ.,

ಪ್ರತಿಗಳು:
1. ಮುಖ್ಯ ಇಂಜಿನಿಯರ್ (ವಿ),ಮೆಸ್ಕಾಂ., ಮಂಗಳೂರು/ಶಿವಮೊಗ್ಗ ವಲಯ.
2. ಅಧೀಕ್ಷಕ ಇಂಜಿನಿಯರ್(ವಿ)(ತಾಂ)/(ವಾಣಿಜ್ಯ)/(ಖರೀದಿ)/(ಯೋಜನೆಗಳು), ಕಾರ್ಪೊರೇಟ್ ಕಛೇರಿ ಮೆಸ್ಕಾಂ., ಮಂಗಳೂರು
3. ಅಧೀಕ್ಷಕ ಇಂಜಿನಿಯರ್ (ವಿ), ಆರ್.ಟಿ ವೃತ್ತ/ಮಾಸಂಅ ಕೇಂದ್ರ/ಡಿಸಿಸಿ & ಸ್ಕಾಡಾ.,ಮೆಸ್ಕಾಂ., ಮಂಗಳೂರು
4. ಅಧೀಕ್ಷಕ ಇಂಜಿನಿಯರ್ (ವಿ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವೃತ್ತಗಳು,

ತಮ್ಮ ಅಧೀನ ಎಲ್ಲಾ ಅಧಿಕಾರಿ/ನೌಕರರ ಗಮನಕ್ಕೆ ತರಲು ಹಾಗೂ ಕಛೇರಿ ನಾಮಫಲಕಗಳಲ್ಲಿ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

SM 13/11/19

5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು
6. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು.
7. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐಟಿ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು-**ಮೆಸ್ಕಾಂ., ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
8. ಕಂಪನಿ ಕಾರ್ಯದರ್ಶಿ, ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮೆಸ್ಕಾಂ., ಎಲ್ಲಾ ಕಾ & ಪಾ ವಿಭಾಗಗಳು-**ತಮ್ಮ ಅಧೀನ ಎಲ್ಲಾ ಶಾಖಾ ಕಛೇರಿಗಳಿಗೆ ಮಾಹಿತಿ ನೀಡುವುದು.**
10. ಲೆಕ್ಕಾಧಿಕಾರಿ(ಆಂ.ಪ), ಮೆಸ್ಕಾಂ., ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು.
11. ಲೆಕ್ಕಾಧಿಕಾರಿ(ಸಾಸಂ& ಸಂ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು
12. ಹಿರಿಯ ಆಪ್ತ ಕಾರ್ಯದರ್ಶಿ- ವ್ಯ.ನಿ./ನಿ(ತಾಂ), ಮೆಸ್ಕಾಂ.,
13. ಆಪ್ತ ಕಾರ್ಯದರ್ಶಿ, ಮು.ಆ.ಅ,/ಆ.ಸ(ಆಂ.ಪ), ಮೆಸ್ಕಾಂ.,

ತಮ್ಮ ಅಧೀನ ಎಲ್ಲಾ ಅಧಿಕಾರಿ/ನೌಕರರ ಗಮನಕ್ಕೆ ತರಲು ಹಾಗೂ ಕಛೇರಿ ನಾಮಫಲಕಗಳಲ್ಲಿ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.